296

ಮೈಸೂರ್ ಫಾರೆಸ್ಟ್ ಡಿಪಾರ್ಟ್‌ಮೆಂಟ್.

ಕೋಲಾರ್ ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 28ನೇ ಫಬ್ರವರಿ 1896ನೇ ಇಸವಿ, ಮೊಕ್ಕಾಂ ಚಿಕ್ಕಬಳ್ಳಾಪುರ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

(1.) ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ ತಮ್ಮಾಂ ತಾಲ್ಲೂಕುಗಳಲ್ಲೂ ಫಾರೆಸ್ಟ್‌ಗಳಲ್ಲೂ ಸಹ, ತಂಗಡಿ ಮತ್ತು ಕಕ್ಕೆ ಚಕ್ಕೆಯನ ಜಮಾಯಿಸತಕ್ಕ ಬಗ್ಗೆ ಲೈಸೆನ್ಸ್ ಕೊಡತಕ್ಕ ಪದ್ಧತಿಯನ್ನ ನಿಲ್ಲಿಸಬೇಕೆಂದು ಹುಕುಂ ಜಾರಿಯಾಗಿರುತ್ತೆ.

(2.) ಇದಕ್ಕೆ ಮೊದಲು ಲೈಸೆನ್ಸ್ ಪಡೆದಿರುವ ಜನಗಳು ಅವರವರ ಲೈಸೆನ್ಸಿನಲ್ಲಿ ಕಂಡ ಚಕ್ಕೆಯನ್ನು ನಿಶ್ಚೇಷವಾಗಿ ಮುಂದಿನ ಏಪ್ರೆಲ್ ತಾರೀಖು 15ರ ಒಳಗಾಗಿ ಸಾಗಿಸಿಕೊಂಡು ಹೋಗತಕ್ಕದ್ದು. ಆ ತಾರೀಖು ಕಳೆದನಂತರ ಸದರೀ ಚಕ್ಕೆಯನ್ನ ಜಮಾಯಿಸುವದಕ್ಕಾಗಲಿ, ಡಿಸ್ಟ್ರಿಕ್ಟಿನಲ್ಲಿ ಧಾಸ್ತಾ ಯಿಡುವದಕ್ಕಾಗಲಿ, ಅಥವಾ ರಫ್ತು ಮಾಡತಕ್ಕ ಬಗ್ಯಾಗಲಿ ಯಾವ ಸಂದರ್ಭದಲ್ಲೂ ಅವಕಾಶ ಕೊಡುವದಿಲ್ಲ.

(3.) ಡಿಸ್ಟ್ರಿಕ್ಟ ಮಜಕೂರ ತಾಲ್ಲೂಕುಗಳಲ್ಲಿ ಈ ಬಾಬುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕನ್ನು ಇಜಾರೇದಾರ್‌ರಗಳಿಗೆ ಬಹಿರಂಗವಾದ ಹರಾಜಿನಲ್ಲಿ ಪೋಟಾಪೋಟಿಯಿಂದ ಪೊಕರೂರ್ ಮಾಡಲಾಗುತ್ತದೆ. ಸದರೀ ಹರಾಜಿನ ಕ್ರಮ ಮತ್ತು ಷರತ್ತುಗಳನ್ನ ಕಂಡು ಆಲಾಹಿದ ನೋಟಿಸ್ ಜಾರಿಯಾಗಿರುತ್ತೆ. ಈ ಬಾಬುಗಳನ್ನ ಇಜಾರೇಮಾಡಬೇಕೆಂದು ಉದ್ದೇಶಿಸುವವರು ಕೋಲಾರ್ ಡಿಸ್ಟ್ರಿಕ್ಟ ಫಾರೆಸ್ಟ್ ಆಫೀಸಿಗೆ ಅರ್ಜಿಯನ್ನ ಬರೆದು ನೋಟಿಸ್‌ಗಳನ್ನ ತರಿಸಿಕೊಂಡು ತಪ್ಪೀಲ್ ತಿಳಿದುಕೊಳ್ಳಬೇಕಾಗಿ ಕೋರಲ್ಪಟ್ಟಿದೆ.

ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,

(1.) ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ ಇದರಡಿ ನಮೂದಿರುವ ತಾಲ್ಲೂಕುಗಳಲ್ಲಿ ದೊರೆಯುವ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಇಜಾರೆಯ ಒಟ್ಟು ಸ್ವತಂತ್ರದ ಹಕ್ಕು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆ.

ಹರಾಜ್ ತಾರೀಖು ಮತ್ತು ಹರಾಜು ನಡಿಸುವ ಸ್ಥಳ ವಗೈರೆ ತಪ್ಸೀಲ್‌ಗಳು ಈ ಕೆಳಗೆ ವಿವರಿಸಲ್ಪಟ್ಟಿರುತ್ತವೆ.

ತಾಲ್ಲೂಕುಗಳು.	ನಂಬರ್	ಹೋಬಳಿಗಳು.	ಇಜಾರೆಯ ಹಕ್ಕಿನ ಕಾಲ.	ಹರಾಜಿನ ತಾರೀಖು.	ಹರಾಜಾಗುವ ಸ್ಥಳ.	ಹರಾಜು ನೋಡಿಸುವ ಅಧಿಸರುಗಳು.	ಹರಾಜು ಯಾರಿಂದ ನಂಜೂರಾಗಬೇಕಾ ದದ್ದು.	ಪರಾ.
I ಕೋಲಾರ	1	ಕೋಲಾರ	1896ನೇ ಇಸವಿ ಜುಲೈ ಸರ್ಕಾರ್ ಲಾಗಾಯತು 1897ನೇ ಜೂನ್ ಆಖೈರ ತನಕ.	1896ನೇ ಇಸವಿ ಮೇ ತಾರೀಖು 14ಲ್ಲಿ.	ಕೋಲಾರ ಡಿಸ್ಟ್ರಿಕ್ಟ ಕಚೇರಿಯಲ್ಲಿ.	ಕೋಲಾರ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರು.	ಕೋಲಾರ ಡಿಸ್ಟ್ರಿಕ್ಟ ಕಮ್ಮಿಷನರ ಸಾಹಿಬರವರಿಂದ	ತಾಲ್ಲೂಕಾರ್ ಹರಾಜು ಜರಿಗಲ್ಲದ್ದುತ್ತದೆ.
	2	ಪಕ್ಕಲೇರಿ						
	3	ಹುತ್ತೂರು						
	4	ವೇಮಗಲ್ಲು						
	5	ಸುಗಟೂರು						
	6	ದಳಸನೂರು						
	7	ಹೋಳೂರು						
II ಹೂಲೂರು	1	ಮೂಲೂರು						
	2	ನರಸಾಪುರ						
	3	ಲಕ್ಕೂರು						
	4	ಮಾಸ್ತಿ						
	5	ಹುಳದೇನಹಳ್ಳಿ						
	6	ತ್ಯಾಕಲ್ಲು						
III ಬಾರಿಂಗಪೇಟೆ	1	ಬಾರಿಂಗಪೇಟೆ						
	2	ಬೂದಿಕೋಟೆ						
	3	ಕಾವಸಮುದ್ರ						
	4	ಶೇತಮಂಗಲ						
	5	ಕ್ಯಾಸಂಬಳ್ಳಿ						
	6	ರಾಮಸಾಗರ						
	7	ದಾಸರಹೊಸಹಳ್ಳಿ						

297

(2.) ಮೇಲ್ಕಂಡ ತಾರೀಖಿನ ಮಧ್ಯಾನ್ನ 3 ಘಂಟೆಯ ಲಾಗಾಯತು ಸಾಯಿಂಕಾಲದ ವರೆಗೂ ಹರಾಜು ಕ್ರಯ ಜರಗುವದು ಮತ್ತು ಆ ದಿವಸವೇ ಹರಾಜು ಖೈದಾಗದೇ ಇದ್ದಲ್ಲಿ ಖೈದಾಗುವ ವರೆಗೂ ಮೂರನೇದಿನವೂ ಸಹ ನಡಿಸಲ್ಪಡುತ್ತದೆ.

(3.) ಮೇಲ್ಕಂಡ ಬಟ್ಟು ಸ್ವತಂತ್ರದ ಇಜಾರೆ ಹಕ್ಕು ಡೆಪ್ಯೂಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟು ಆಖ್ಯೈರ್ ಚಡ ಸವಾಲ್‌ದಾರ್‌ರುಗಳಿಗೆ ಕೊಡಲ್ಪಡುವದು. ಆದರೆ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಸಹ ಡೆಪ್ಯೂಟಿ ಕಮ್ಮಿಷನರವರು ಮೊಖ್ತ್ಯಾರ್‌ರಾಗಿದ್ದಾರೆ. ಪೋಟೂ ಪೋಟೀಯಲ್ಲಿ ನಿಲ್ಲುವ ಆಖ್ಯೈರ್ ಚಡಸವಾಲ್ ಮೊಬಲಗು ಮೇಲ್ಕಂಡ 12 ತಿಂಗಳ ಕಾಲದಲ್ಲಿ ಕಡದು ಜಮಾಯಿಸಿ ಸಾಗಿಸಿಕೊಳ್ಳಲ್ಪಡುವ ಚಕ್ಕೆಯ ಖರೀದಿ ಎಂದು ಭಾವಿಸಲ್ಪಡುತ್ತದೆ.

(4.) ಇಜಾರೆ ಮಾಡಬೇಕೆಂದು ಅಪೇಕ್ಷಿಸುವವರು ತಾವೇ ಖುದ್ದು ಬಂದು ಹರಾಜಿನಲ್ಲಿ ಚಡಸವಾಲ್ ಮಾಡಬಹುದು. ಅಥವಾ ತಮ್ಮಿಂದ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರನ್ನಾಗಲಿ ಕಳುಹಿಸಬಹುದು. ಚಡಸವಾಲ್ ಮಾಡಲಪೇಕ್ಷೆಯುಳ್ಳವರು ಖಾತರೀ ಬಗ್ಯಾಗಿ ಒಂದುನೂರು ರೂಪಾಯಿಗಳನ್ನು ಹರಾಜು ಕಾಲದಲ್ಲಿ ಹರಾಜು ಮಾಡುವ ಆಫಿಸರವರಲ್ಲಿ ತೇವಣಿ ಇಡಬೇಕು. ತಿರಸ್ಕರಿಸಲ್ಪಟ್ಟ ದರಖಾಸ್ತುದಾರ್ರು ಹಾಜರ್ಮಾಡಿದ್ದ ಡಿಪಾಜಿಟ್ ಮೊಬಲಗು ಹರಾಜು ಖೈದಾದ ಕೂಡ್ಲೆ ವಾಪಸ್ ಮಾಡಲ್ಪಡುತ್ತೆ. ಪ್ರತಿ ಬಂದು ತಾಲ್ಲೂಕಿನ ಸವಾಲ್ ಖೈದಾದ ಒಡನೆಯೇ ಅಂಗೀಕರಿಸಲ್ಪಟ್ಟ ಸವಾಲ್‌ದಾರ್ರುಗಳು ತಮ್ಮ ಸವಾಲಿನ ಒಟ್ಟು ಮೊಬಲಗಿನಲ್ಲಿ ಮೊದಲೆ ಹಾಜರ್ಮಾಡಿದ್ದ ಮೊಬಲಗೂ ಸೇರಿ ಕಾಲು ಹಿಸ್ಸೆಯನ್ನು ಪಾವತಿ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಮೊದಲೆ ಇಟ್ಟಿದ್ದ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬ್ ಪುನರಾ ಹರಾಜು ಮಾಡಿಸುವದರಲ್ಲಿ ಉಂಟಾಗುವ ನಷ್ಟಕ್ಕೂ ಸಹ ಈತನನ್ನೇ ಗುರಿಮಾಡಲ್ಪಡುತ್ತೆ. ಆದರೆ ಆದಾಯ ವೆನಾದರೂ ಹೊರಟಲ್ಲಿ ಸದರೀಯವನಿಗೆ ಅದರ ಹಕ್ಕು ಇರುವದಿಲ್ಲ.

(5) ಮೇಲ್ಕಂಡ ಮೇರೆಗೆ ನಡಿಸಲ್ಪಡಬೇಕಾಗಿ ಬರುವ ಎರಡನೇ ಹರಾಜಿನ ಆಖ್ಯೈರ್ ಸವಾಲ್‌ಗಿಂತಲೂ ಮೊದಲನೇ ಹರಾಜಿನಲ್ಲಿ ಜಾಸ್ತಿಯಾಗಿ ಪುಂಟಾಗಿದ್ದ ಮೊಬಲಗನ್ನು ಮೊದಲನೇ ಹರಾಜಿನ ಆಖ್ಯೈರ್ ಸವಾಲ್‌ದಾರನು ಸರ್ಕಾರಕ್ಕೆ ಪಾವತಿ ಮಾಡಬೇಕು.

(6) ಡೆಪ್ಯೂಟಿ ಕಮ್ಮಿಷನರವರಿಂದ ಹರಾಜು ಮಂಜೂರಾದ 3 ದಿವಸದೊಳಗಾಗಿ ಈ ಕೆಳಗೆ ಮೂದಿಸಿರುವ ಷರತ್ತುಗಳ ಕಂಡು ನಡದುಕೊಳ್ಳತಕ್ಕ ಬಗ್ಗೆ ಬದ್ಧನಾಗಿ ಇಜಾರೇದಾರನು ಮುಚ್ಚಳಿಕೆ ಬರೆದುಕೊಡಬೇಕು.

(7.) ಇಜಾರೆ ಬಾಬತು ಬಾಕಿ ಮುಕ್ತಾಲು ಹಿಸ್ಸೆಯನ್ನು ಇದೇ ಇಸವಿ ಮೇ ಮಾಹೆ ಆಖ್ಯೈರೊಳಗಾಗಿ ಸಾರ್ವಾವಣಿ ಮಾಡತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಮೊದಲು ಪಾವತಿಯಾದ ಕಾಲುಹಿಸ್ಸೆ ತೇವಣಿಯು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತದೆ ಯಲ್ಲದೆ ಚಕ್ಕೆ ಜಮಾಯಿಸುವ ಇಜಾರೆ ಹಕ್ಕನ್ನು ಪುನಹ ಹರಾಜು ಮಾಡುವದರಲ್ಲಿ ಬಂದೀತು.

(8.) ಮೇಲ್ಕಂಡ ಮೇರೆ ಪೂರ್ತಿ ಮೊಬಲಗು ಇರಸಾಲ್ ಅದನಂತರ ಈ ಕೆಳಗೆ ನಮೂದಿರುವ ಷರತ್ತುಗಳು ಕಂಡು ಬಂದು ರೂಪಾಯಿನ ಛಾವಣಿ ಕಾಗದದಲ್ಲಿ ಇದೇ ಇಸವಿ ಜೂನ್ ಗುರ್ತೇ ತಾರೀಖಿನಲ್ಲಿ ಕರಾರ್ ಬರೆದುಕೊಟ್ಟು ಅನಂತರ ಬಾಬು ಸುಫರ್ದು ಹೊಂದಬೇಕಾಗಿರುತ್ತೆ.

ಷರತ್ತುಗಳು ಯಾವವೆಂದರೆ.

(1) ಬಂದು ವರುಷಕ್ಕಿಂತಲೂ ಎಳೇದಾದ ಗಿಡಗಳನ್ನು ಕಡಿಯುವದಿಲ್ಲ.

(2) ಕಡಿಯುವ ವಿಷಯ ವೋಟು ಮತ್ತು ರಂಬೆಗಳಲ್ಲಿರುವ ಚಕ್ಕೆಯನ್ನು ನಿಶ್ಕೇಷವಾಗಿ ತೆಗೆದುಕೊಳ್ಳುತ್ತೇನೆ ಯಾವ ಗಿಡವನ್ನಾಗಲಿ ಸುಮ್ಮನೆ ಕಡಿದು ಬೊಬ್ಬೆಯನ್ನ ತೆಗೆಯದೆ ಬಿಡುವದಿಲ್ಲ.

(3) ಚಕ್ಕೆಯನ್ನ ತೆಗೆದನಂತರ ವಿಷಯ್ಯ ಸಾದೆಯೂ ಇಜಾರದಾರನಿಗೆ ಸೇರಿದ್ದೇ ಶಿವಾಯಿ ಸರ್ಕಾರಕ್ಕೆ ಸೇರಿದ್ದಲ್ಲ.

(4) ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ವೊಕರರ್ ಮಾಡುವ ಮೇರೆಗೆ ನನ್ನ ಕರಾರು ಅನುಸರಿಸಿ ಜಮಾಯಿಸಿ ಸಾಗಿಸಿಕೊಂಡು ಹೋಗುವ ಚಕ್ಕೆಗೆ ತಪ್ಪಿಲಾಗಿ ಲೆಖ್ಕ ಇಡುತ್ತೇನೆ ಯಪ್ಪಿದೆ ಈ ಬಾಬತು ಲೆಖ್ಕವನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಅಥವಾ ಅವರಿಂದ ಗೊತ್ತು ಮಾಡಲ್ಪಡುವ ಆಫಿಸರು ಕೇಳಿದಾಗ್ಯೆ ತನಿಖೆಬಗ್ಯೆ ಹಾಜರ್ಮಾಡುತ್ತೇನೆ.

(5) ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹುಕುಂ ಮಾಡುವ ಮೇರೆ ನಾನು ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿಯ ಚಕ್ಕೆಗೂ ಪ್ಯಾಸ್ ಕೊಡುತ್ತೇನೆ.

(6) ನಾನು ಜಮಾಯಿಸುವ ವಿಷಯ್ಯ ಚಕ್ಕೆಯನ್ನೂ 1897ನೇ ಇಸವಿ ಜೂನ್ ಆಖ್ಯೈರೊಳಗಾಗಿ ನಿಶ್ಕೇಷವಾಗಿ ನನ್ನ ಇಜಾರೆ ತಾಲ್ಲೂಕಿನಿಂದ ಹೊರಗೆ ಸಾಗಿಸಿಕೊಂಡು ಹೋಗುತ್ತೇನೆ.

(7) ಸ್ಪೇಟ್ ಫಾರೆಸ್ಟ್ ಮತ್ತು ಪ್ರೊಟೆಕ್ಟೆಡ್‌ಗಳಲ್ಲಿ ಸಹ ನನ್ನಿಂದಲಾಗಲಿ ನನ್ನ ಕಡೆ ಜನಗಳಿಂದಲಾಗಲಿ ಬೆಂಕಿಯ ಅಥವಾ ಇನ್ಯಾವ ಕಾರಣದಿಂದಾಗ್ಯೂ ಖರೀದಿ ಬಾಳತಕ್ಕ ಮರಗಳು ಅಥವಾ ಫಸಲ್‌ಗಳು ನಾಶವಾದಲ್ಲಿ, ಆದರಿಂದ ಪುಂಟಾಗುವ ನಷ್ಟಕ್ಕೆ ನಾನೇ ಜವಾಬ್ ಮಾಡಲು ಬದ್ಧನಾಗಿದ್ದೇನೆ.

(8) ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ನಾನಾಗಲಿ ನನ್ನ ತರಫ ಜನಗಳಾಗಲಿ ಅತಿಕ್ರಮಿಸಿ ನಡೆದಲ್ಲಿ ನನ್ನ ಇಜಾರೆಯನ್ನ ರದ್ದು ಮಾಡಬಹುದು. ಮತ್ತು ನಾನು ಆವರೆಗೆ ಜಮಾಯಿಸಿ ಹಾಜರಿಟ್ಟುಕೊಂಡಿರತಕ್ಕ ಚಕ್ಕೆಯನ್ನ ಸರ್ಕಾರದವರು ಜಪ್ತಿ ಮಾಡಬಹುದಲ್ಲದೆ ನಾನು ಪಾವತಿ ಮಾಡಿರುವ ಮೊಬಲಗನ್ನ ಪೂರ್ತಿಯಾಗಿ ಯಾಗಲಿ ಅಥವಾ ಆ ಪೈಕಿ ಕೆಲವು ಭಾಗವನ್ನಾಗಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಬಹುದು.

ಬಿ. ರಾಮಸ್ವಾಮಯ್ಯರ್,
ಫೋರ್ ಡೆಪ್ಯೂಟಿ ಕಮ್ಮಿಷನರ್.